ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) ಐ.ಎ.ಎಸ್. – 218

ಐ.ಪಿ.ಎಸ್. – 139

ಆ) ಭಾರತೀಯ ಆಡಳಿತ ಸೇವೆ (ನೇಮಕಾತಿ ನಿಯಮಗಳು) ನಿಯಮಗಳು 1954ರ ನಿಯಮ 9(1)ರ ಅನ್ವಯ ಒಟ್ಟು ಮಂಜೂರಾದ ಐ.ಎ.ಎಸ್. ಹುದ್ದೆಗಳ ಶೇಕಡ 33 $^{1}/_{3}$ ಮೀರದಷ್ಟು ಹುದ್ದೆಗಳನ್ನು ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳಿಂದ ಐ.ಎ.ಎಸ್.ಗೆ ಮುಂಬಡ್ತಿ ನೀಡಿ ತುಂಬಬಹುದಾಗಿದೆ.

ಇ) 2007ನೇ ಸಾಲಿನಲ್ಲಿ ಉದ್ಭವಿಸಿದ ಐ.ಎ.ಎಸ್. ಮುಂಬಡ್ತಿಯ ರಿಕ್ತ ಸ್ಥಾನಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ 19.3.2009ರ ಅಧಿಸೂಚನೆಯಲ್ಲಿ ಈ ಕೆಳಕಂಡ ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳನ್ನು ಐ.ಎ.ಎಸ್.ಗೆ ಮುಂಬಡ್ತಿ ಮೂಲಕ ನೇಮಿಸಲಾಗಿದೆ.

(1) ಆರ್. ಶಾಂತರಾಜು (2) ಎಸ್.ಎಸ್. ಪಟ್ಟಣಶೆಟ್ಟಿ (3) ಎಸ್. ಶಂಕರನಾರಾಯಣ (4) ಬಿ.ಎನ್. ಕೃಷ್ಣಯ್ಯ. ನಂತರದಲ್ಲಿ ನ್ಯಾಯಾಲಯದ ಆದೇಶದ ಅನ್ವಯ ಶ್ರೀ ಎ.ಎಂ. ಕುಂಜಪ್ಪರವರನ್ನು ದಿನಾಂಕ 11.8.2010ರ ಅಧಿಸೂಚನೆಯಲ್ಲಿ ಐ.ಎ.ಎಸ್.ಗೆ ಮುಂಬಡ್ತಿ ನೀಡಿ ನೇಮಿಸಲಾಗಿದೆ.

2008 ಮತ್ತು 2009ನೇ ಸಾಲಿನಲ್ಲಿ ಉದ್ಭವಿಸಿರುವ ಮುಂಬಡ್ತಿಗೆ ಮೀಸಲಾದ ಐ.ಎ.ಎಸ್. ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ. 2010ನೇ ಸಾಲಿನಲ್ಲಿ ಉದ್ಭವಿಸಿದ ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತಿದೆ.

ಉಳ್ಳಾಲ ಪುರಸಭೆಯಲ್ಲಿ ಎ.ಡಿ.ಬಿ. ಕುಡಿಯುವ ನೀರಿನ ಯೋಜನೆ

127 (382) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಎ.ಡಿ.ಬಿ. ಯೋಜನೆಯಡಿ ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಯು ಯಾವ ಹಂತದಲ್ಲಿದೆ;

ಆ) ಈ ಯೋಜನೆಗೆ ಇದುವರೆವಿಗೂ ಬಿಡುಗಡೆ ಮಾಡಿ ವೆಚ್ಚ ಮಾಡಿರುವ ಹಣವೆಷ್ಟು; ವಿವರ ನೀಡುವುದು ;

ಇ) ಈ ಯೋಜನೆಯ ಕಾಮಗಾರಿಯು ಸಂಪೂರ್ಣವಾಗಿ ಅನುಷ್ಠಾನಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):

ಅ) ಉಳ್ಳಾಲ ಪಟ್ಟಣಕ್ಕೆ ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಯ ಮುಖ್ಯ ಪೈಪ್ ಲೈನ್ ಕಾಮಗಾರಿಗಳನ್ನು / ಮೇಲ್ಮಟ್ಟದ ಜಲ ಸಂಗ್ರಹಾರಗಳನ್ನು ಪೂರ್ಣಗೊಳಿಸಿ ಮೇ–2009ರಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಇದೀಗ ಸುಮಾರು 6076 ಮನೆಗಳಿಗೆ ನಲ್ಲಿ ನೀರಿನ ಸಂಪರ್ಕಕ್ಕಾಗಿ ಬಾಲ್ ವಾಲ್ವ್‌ಗಳನ್ನು ಅಳವಡಿಸುವ ಕಾಮಗಾರಿಯೂ ಕೂಡ ಮುಗಿದಿದ್ದು, ಪುರಸಭೆಗೆ ಹಸ್ತಾಂತರಿಸುವ ಹಂತದಲ್ಲಿರುತ್ತದೆ. ಪುರಸಭೆಯವರು ಇದುವರೆವಿಗೂ 702 ಮನೆಗಳಿಗೆ ಮಾತ್ರ ನಲ್ಲಿ ನೀರಿನ ಸಂಪರ್ಕವನ್ನು ಕಲ್ಪಿಸಿರುತ್ತಾರೆ.

ಆ) ಕುಡಿಯುವ ನೀರಿನ ಯೋಜನೆಗೆ ಇದುವರೆವಿಗೆ ಒಟ್ಟು ರೂ. 13,54,07,803/– ವೆಚ್ಚವಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ.

- ಗುತ್ತಿಗೆ ಪ್ಯಾಕೇಜ್ ಸಂಖ್ಯೆ: 1007ಸಿ:– ರೂ. 6,69,78,383.00
- ಗುತ್ತಿಗೆ ಪ್ಯಾಕೇಜ್ ಸಂಖ್ಯೆ: 1007ಸಿ–1:– ರೂ. 2,39,47,670.00
- ಗುತ್ತಿಗೆ ಪ್ಯಾಕೇಜ್ ಸಂಖ್ಯೆ: 1007ಡಿ:– ರೂ. 4,45,81,750.00

ಉಳ್ಳಾಲ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಮತ್ತು ಮಂಗಳೂರು ಮಹಾನಗರ ಪಾಲಿಕೆಯ ಕುಡಿಯುವ ನೀರಿನ ಮುಖ್ಯ ಕೊಳವೆಯ ಕಾಮಗಾರಿ ಒಂದೇ ಆಗಿರುತ್ತದೆ. ತುಂಬೆ ಕಿಂಡಿ ಅಣೆಕಟ್ಟಿನಿಂದ ತುಂಬೆಯಲ್ಲಿರುವ ಶುದ್ಧೀಕರಣ ಘಟಕದಲ್ಲಿ ಶುದ್ಧೀಕರಿಸಿದ ನಂತರ ಮಂಗಳೂರಿಗೆ ಹೊಸ ಕೊಳವೆಯನ್ನು ರಾಷ್ಟ್ರೀಯ ಹೆದ್ದಾರಿ 48ರ ಬದಿಯಲ್ಲಿ ಅಳವಡಿಸಿ ನೀರು ಮಂಗಳೂರಿನ ಪಡೀಲು ಜಲ ಸಂಗ್ರಹಾರಕ್ಕೆ ತರುವುದು. ನಂತರ ಉಳ್ಳಾಲ ಪಟ್ಟಣಕ್ಕೆ ಪಡೀಲು ಜಲ ಸಂಗ್ರಹಾಗಾರದಿಂದ ನೀರು ಸರಬರಾಜು ಮಾಡುವುದು. ತುಂಬೆಯಿಂದ ಪಡೀಲಿಗೆ ಬರುವ ಮುಖ್ಯ ಕೊಳವೆ ರಾಷ್ಟ್ರೀಯ ಹೆದ್ದಾರಿ 48ರ ಬದಿಯಲ್ಲಿ ಕಾಮಗಾರಿ ಮಾಡುವಲ್ಲಿ ರಾಷ್ಟ್ರೀಯ

ಹೆದ್ದಾರಿಯಲ್ಲಿನ ಅನುಮತಿಯಲ್ಲಿನ ವಿಳಂಬದಿಂದ ಅಂತಿಮವಾಗಿ ಮೇ–2009ರಲ್ಲಿ ಪಡೀಲು ಜಲ ಸಂಗ್ರಹಾಗಾರಕ್ಕೆ ತುಂಬೆಯಿಂದ ನೀರು ಸರಬರಾಜು ಮಾಡಲಾಯಿತು. ಮೇ–2009ರಿಂದಲೇ ಪ್ರಾಯೋಗಿಕವಾಗಿ ನೀರು ಸರಬರಾಜನ್ನು ಪಡೀಲಿನಿಂದ ಉಳ್ಳಾಲಕ್ಕೆ ನೀಡಲಾಗುತ್ತಿದೆ. ನಂತರ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿ ಉಳ್ಳಾಲ ನಗರದಲ್ಲಿ ಚಾಲನೆಗೊಂಡಿದ್ದು, ಇದೀಗ ಅಂದರೆ ಫೆಬ್ರವರಿ–2011ರಲ್ಲಿ ಮುಕ್ತಾಯವಾಗಿದೆ. ಉಳ್ಳಾಲದ ತೊಕ್ಕೊಟ್ಟು ಕಡೆಗೆ ರೈಲ್ವೆ ಹಳಿಗಳ ಮೇಲೆ ನೀರಿನ ಮುಖ್ಯ ಕೊಳವೆಗಳನ್ನು ಕೊಂಡೊಯ್ಯಲು ಪ್ರತ್ಯೇಕ ಸ್ಟೀಲ್ ಗರ್ಡರ್ ಬ್ರಿಡ್ಜ್ ನಿರ್ಮಾಣಕ್ಕೆ ದಕ್ಷಿಣ ರೈಲ್ವೆ ಇಲಾಖೆಯಿಂದ ಅನುಮತಿ ಪಡೆಯುವಲ್ಲಿ ವಿಳಂಬವಾಗಿ ಈ ಕಾಮಗಾರಿ 2010ರ ಜನವರಿಯಲ್ಲಿ ಮುಗಿದಿರುತ್ತದೆ.

ಈ) ಸರ್ಕಾರದ ಮಟ್ಟದಲ್ಲಿ ಹಾಗೂ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಯೋಜನೆಯ ಪ್ರಗತಿ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗಿದೆ.

ಬಂಟ್ವಾಳ ಪುರಸಭೆಯಲ್ಲಿ ಘನತ್ಯಾಜ್ಯ ವಿಲೇವಾರಿ

129 (384) ಖಾದರ್ ಯು.ಟಿ. (ಮಂಗಳೂರು): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ಪುರಸಭೆಯವರು ಘನತ್ಯಾಜ್ಯವನ್ನು ಶೇಖರಿಸಲು ಸಜಪನಡು ಗ್ರಾಮದಲ್ಲಿ ಜಮೀನು ಗುರುತಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಪ್ರದೇಶದ ಪರಿಸರ ಹಾನಿಯ ಬಗ್ಗೆ ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಘನತ್ಯಾಜ್ಯ ವಿಲೇವಾರಿಗೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ ; (ವಿವರ ಒದಗಿಸುವುದು) ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):